# ಪೂರ್ವಜನ್ಮದಲಿ ನಾ ಮಾಡಿದ ಪಾಪದಿಂ

1. **Ref.:** Shri Purandara Dasara Sahitya Part – 6, Sankeerna Sangraha, edited by Shri Betageri Krishna Sharma and Shri Bengeri Huchha Rayaru, page No. 25.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 379.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 287.
4. **Note:** Lyrics in all the above references are almost same. The wordings given here are mainly as per Ref. 2.
5. **Note:** Few wordings are taken from Ref. 1 and mixed with Ref. 2. The basic idea/meaning present in the song in all these references remain same with these changes. Hence, they are mentioned here as the singer has followed these wordings fully.
6. **Note:** Singer has followed these lyrics.

ರಾಗ: ಕಾಂಬೋದಿ ತಾಳ: ಝಂಪೆ

ಪೂರ್ವ ಜನ್ಮದಲಿ ನಾ ಮಾಡಿದ ಪಾಪದಿಂ
ದುರ್ವಿಯೊಳು ಜನಿಸಿದೆನೊ ಕೃಷ್ಣ
ಕಾರುಣ್ಯ ನಿಧಿಯೆನ್ನ ಕಾಯಬೇಕಯ್ಯ ಹರಿ
ವಾರಿಜನಾಭ ಶ್ರೀ ಕೃಷ್ಣ ॥ ಪ ॥

ಹುಟ್ಟಿದಂದಿಂದಿಗೂ ಸುಖವೆಂಬುದನು ಅರಿಯೆ
ಕಷ್ಟಪಡುತಿಹೆನಯ್ಯ ಕೃಷ್ಣ
ದಟ್ಟ ದಾರಿದ್ರ್ಯವನು ಪರಿಹರಿಸದಿರೆ ದೂರು
ತಟ್ಟುವುದು ನಿನಗಯ್ಯ ಕೃಷ್ಣ ॥ 1 ॥

ಕಾಸಿನಾ ಆಸೆಯನು ಮಾಡಿ ಬಹು ದಿನದಿಂದ ಆ-
ಯಾಸದೊಳಗಿರುತಿಹೆನೊ ಕೃಷ್ಣ
ಆಸೆಯನು ಬಿಡಿಸಿ ಮಿಗೆ ದೋಷವನು ಪರಿಹರಿಸೊ

ಸಾಸಿರನಾಮ ಶ್ರೀ ಕೃಷ್ಣ ॥ 2 ॥

ಮುಟ್ಟಲಂಜುವರು ಬಂಧುಗಳು ಕಂಡರೆ ಎನ್ನ
ಅಟ್ಟಿ ಕೊಲ್ಲುತಿಹರಯ್ಯ ಕೃಷ್ಣ
ತೊಟ್ಟಿಲ ಶಿಶು ಬಾಯ ಬಿಡುವ ತೆರನಂತೆ ಕಂ-
ಗೆಟ್ಟು ಶೋಕಿಸುವೆನೊ ಕೃಷ್ಣ ॥ 3 ॥

ಈ ಪರಿಯಿಂದ ನಾನಾಪತ್ತು ಪೇಳಿದರ-
ನಾಥನ್ನ ಕಾಯದಿದೇಕೊ ಕೃಷ್ಣ
ಶಪಿಸುವೆನೆಂದರೆ ಸಾವು ಹುಟ್ಟು ನಿನಗಿಲ್ಲ
ಏಸು ದೊರೆತನವಯ್ಯ ಕೃಷ್ಣ ॥ 4 ॥

ತಂದೆ ತಾಯಿಯು ಇಲ್ಲ ಬಂಧು ಬಳಗವು ಇಲ್ಲ
ಇಂದೆನಗೆ ಗತಿಯೇನೊ ಕೃಷ್ಣ
ಮಂದರಧರ ಶ್ರೀ ಪುರಂದರ ವಿಠಲ ನೀ
ಬಂದು ನೆಲೆಯಾಗಯ್ಯ ಕೃಷ್ಣ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಅಘ** – ಪಾಪ.

**ಊರ್ವಿ** – ಭೂಮಿ.

**ಮಿಗೆ** – ಹೆಚ್ಚಾದ.

**Classification:** Keerthane
**Ankita:** sri purandara vittala
**Location:** NA
**Category:** Sankeerna Sangraha, vidhi chintane
**Sub-Category:** janma, karma, bhumi, Krishna, karuna, huttu, sukha, rokka, ase, bandhu, koosu, bayi, shapa, marana, tande, tayi,
**Pravachana:** NA
**Explanation:** NA